ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 22-06-1971.

**<u>*ತೀವ್ರ ಪರುಷಾರ್ಥಿಯ ಲಕ್ಷಣಗಳು*</u>** (तीव्र पुरुषार्थी की निशानियाँ)

ಶುದ್ಧ ಸಂಕಲ್ಪ ಸ್ವರೂಪ ಸ್ಥಿತಿಯ ಅನುಭವ ಮಾಡುತ್ತೀರಾ? ಅನೇಕ ಸಂಕಲ್ಪಗಳ ಸಮಾಪ್ತಿಯಾಗಿ ಒಂದೇ ಶುದ್ಧ ಸಂಕಲ್ಪ ಉಳಿಯುತ್ತದೆ. ಈ ಸ್ಥಿತಿಯ ಅನುಭವ ಮಾಡುತ್ತಿರುವಿರಾ? ಈ ಸ್ಥಿತಿಯನ್ನೇ ಶಕ್ತಿಶಾಲಿ, ಸರ್ವ ಕರ್ಮ- ಬಂಧನದಿಂದ ಅತೀತ ಮತ್ತು ಅತಿಪ್ರಿಯ ಸ್ಥಿತಿ ಎಂದು ಹೇಳಲಾಗುತ್ತದೆ. ಇಂತಹ ಭಿನ್ನ ಮತ್ತು ಪ್ರಿಯ ಸ್ಥಿತಿಯಲ್ಲಿ ಸ್ಥಿತರಾಗಿ ಮತ್ತೆ ಕರ್ಮ ಮಾಡಲು ಕೆಳಗೆ ಬರುತ್ತೀರಿ. ಯಾರದಾದರೂ ಮನೆ ಎತ್ತರದಲ್ಲಿದ್ದರೆ, ಏನಾದರೂ ಕೆಲಸಕ್ಕೆ ಕೆಳಗೆ ಬಂದರೂ ತಮ್ಮ ನಿಜವಾದ ಸ್ಥಾನವನ್ನು ಮರೆಯುವುದಿಲ್ಲ. ಅದೇ ರೀತಿ ತಮ್ಮ ಉನ್ನತ ಸ್ಥಿತಿ ಎಂದರೆ ಅಸಲಿ ಸ್ಥಾನವನ್ನು ಏಕೆ ಮರೆಯುತ್ತೀರಿ? ಅದೇ ರೀತಿ ಈಗೀಗ ಸ್ವಲ್ಪ ಸಮಯಕ್ಕೆ ಕೆಲಸಕ್ಕಾಗಿ ಕೆಳಗೆ ಇಳಿದಿದ್ದೇವೆ. ಆದರೆ ಸದಾಕಾಲದ ಮೂಲಸ್ಥಿತಿ ಅದೇ ಆಗಿದೆ ಎಂದು ತಿಳಿಯಿರಿ, ಆಮೇಲೆ ಎಷ್ಟೇ ಕೆಲಸ ಮಾಡಿದರೂ ಕರ್ಮಯೋಗಿಯ ಸಮಾನ ಕರ್ಮ ಮಾಡುತ್ತಲೇ ತಮ್ಮ ನಿಜಸ್ಥಿತಿ ಮತ್ತು ಸ್ಥಾನವನ್ನು ಮರೆಯುವುದಿಲ್ಲ. ಈ ಸ್ಮೃತಿಯೇ ಸಾಮರ್ಥ್ಯವನ್ನು ಕೊಡುತ್ತದೆ. ಸ್ಮೃತಿ ಕಡಿಮೆಯಿದ್ದರೆ ಸಾಮರ್ಥ್ಯವೂ ಕಡಿಮೆಯಿರುವುದು. ಸಾಮರ್ಥ್ಯ ಎಂದರೆ ಶಕ್ತಿಗಳು. ಮಾಸ್ಟರ್ ಸರ್ವಶಕ್ತಿವಂತನ ಜನ್ಮಸಿದ್ಧ ಅಧಿಕಾರ ಯಾವುದು? ಸರ್ವಶಕ್ತಿಗಳೇ ಮಾಸ್ಟರ್ ಸರ್ವಶಕ್ತಿವಂತನ ಜನ್ಮಸಿದ್ಧ ಅಧಿಕಾರವಾಗಿದೆ. ಈ ಸ್ಮೃತಿಯ ಸ್ಟೇಜ್ ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ಸದಾ ಇರಬೇಕು. ಆದ್ದರಿಂದ ಸದಾ ತಮ್ಮ ಜನ್ಮಸಿದ್ಧ ಅಧಿಕಾರ ಜೊತೆಗಿದೆ ಎಂದು ಅನುಭವ ಮಾಡುತ್ತೀರಾ? ತಮ್ಮನ್ನು ಸುಪುತ್ರರು ಎಂದು ತಿಳಿಯುತ್ತೀರಾ? (ಕೆಲವರು ಸುಪುತ್ರರಾಗಿದ್ದೇವೆ, ಇನ್ನು ಕೆಲವರು ಆಗುತ್ತಿದ್ದೇವೆ ಎಂದು ಹೇಳಿದರು) ಸುಪುತ್ರರಾಗುತ್ತಿದ್ದೀರಾ ಅಥವಾ ಪ್ರಮಾಣವನ್ನು ಕೊಡುತ್ತಿದ್ದೀರಾ? (ಎರಡೂ), ಸುಪುತ್ರರಾಗದಿದ್ದರೆ ನೆನಪಿನ ಯಾತ್ರೆಯೂ ನಿಲ್ಲುವುದಿಲ್ಲ. ಅಂತ್ಯದವರೆಗೆ ಸುಪುತ್ರರಾಗುವ ಪುರುಷಾರ್ಥವನ್ನು ಮಾಡುತ್ತಿದ್ದರೆ ಪ್ರಮಾಣವನ್ನು ಯಾವಾಗ ಕೊಡುವಿರಿ? 2-4 ವರ್ಷಗಳಲ್ಲಿ ಸುಪುತ್ರರಾಗುವಿರಿ, ನಂತರ 2-4 ವರ್ಷಗಳಲ್ಲಿ ಪ್ರಮಾಣ ಕೊಡುವಿರಿ? ಸುಪುತ್ರರಾಗಿದ್ದೀರಿ. ಇಲ್ಲದಿದ್ದರೆ ತಮ್ಮನ್ನು ಏಕೆ ಸಮರ್ಪಿತ ಎಂದು ತಿಳಿಯುತ್ತಿದ್ದಿರಿ? ಸಮರ್ಪಿತರಾಗಿದ್ದೀರೋ ಅಥವಾ ಈಗ ಸಮರ್ಪಿತರಾಗಬೇಕೋ? ಸಮರ್ಪಿತರಾಗುವುದು ಸುಪುತ್ರರಾಗುವುದಲ್ಲವೇ, ತಿಳಿಯಿತೇ?

**ಯಾರು ಶ್ರೀಮತದ ಆಧಾರದಂತೆ ಆದೇಶದನುಸಾರ ನಡೆಯುತ್ತಾರೋ, ತಮ್ಮನ್ನು ಟ್ರಸ್ಟಿ ಎಂದು ತಿಳಿದಿರುತ್ತಾರೋ, ಅವರಿಗೆ ಸುಪುತ್ರರೆಂದು ಹೇಳುತ್ತಾರಲ್ಲವೇ?** ಕೆಲವೆಡೆ ಬಹಳ ವಿಚಾರವೂ ಫಲಿತಾಂಶವನ್ನು ಬದಲಿಸುತ್ತದೆ. ಪರೀಕ್ಷೆಯಲ್ಲಿ ಉತ್ತರಿಸುವ ಬದಲು ಪ್ರಶ್ನೆಯ ವಿಚಾರದಲ್ಲಿದ್ದರೆ ಪೇಪರ್ ಹಾಗೆಯೇ ಉಳಿಯುತ್ತದೆ. ಆದ್ದರಿಂದ ಹೆಚ್ಚು ವಿಚಾರದಲ್ಲಿ ಹೋಗಬಾರದು. ಸುಪುತ್ರರಾಗಿರುವ ಕಾರಣ ಶ್ರೀಮತದಂತೆ ನಡೆಯುತ್ತಿರುವಿರಿ ತಂದೆ ತಿಳಿಸುತ್ತಾರೆ. ಪ್ರಮಾಣವನ್ನು ಕೊಡುವ ಮಾತು ಉಳಿಯಿತು, ಅದನ್ನೂ ಸಹ ಪ್ರತಿಯೊಬ್ಬರೂ ಯಥಾಶಕ್ತಿ ತೋರಿಸುತ್ತಿದ್ದೀರಿ ಮತ್ತು ತೋರಿಸುವಿರಿ. ಎಷ್ಟು ತಂದೆ ಮಕ್ಕಳ ಮೇಲೆ ನಿಶ್ಚಯಬುದ್ಧಿಯವರಾಗಿದ್ದಾರೋ, ಮಕ್ಕಳು ತಮ್ಮ ಮೇಲೆ ಕಡಿಮೆ ನಿಶ್ಚಯಬುದ್ಧಿಯವರಾಗಿದ್ದಾರೆ. ಆದ್ದರಿಂದ ಪ್ರತಿಯೊಂದು ಕಾರ್ಯದಲ್ಲಿ ಫಲಿತಾಂಶವಾಗಿ ವಿಜಯವು ಒಮ್ಮೊಮ್ಮೆ ಕಂಡುಬರುತ್ತದೆ. ತಂದೆಯಲ್ಲಿ ನಿಶ್ಚಯ, ಅಧ್ಯಯನದಲ್ಲಿ(ಜ್ಞಾನ) ನಿಶ್ಚಯವಿದೆ ಹಾಗೆಯೇ ತಮ್ಮಲ್ಲಿ ಎಲ್ಲಾ ಸಮಯ ಮತ್ತು ಪ್ರತಿ ಸಂಕಲ್ಪ ನಿಶ್ಚಯ ಬುದ್ಧಿಯಾಗಿ ಮಾಡುವುದರ ಕೊರತೆಯಿದೆ. ಈ ಕೊರತೆಯನ್ನು ಎಲ್ಲಿಯವರೆಗೆ ಭರ್ತಿ ಮಾಡುವಿರಿ? 2-3 ವರ್ಷಗಳಲ್ಲಿ? 2-3 ವರ್ಷವೆಂದು ಸ್ವಪ್ನದಲ್ಲಿಯೂ ಎಂದೂ ಯೋಚಿಸಬೇಡಿ. ಏನೆಂದು ಹೇಳಬೇಕು? ಈಗಲೇ. ತೀವ್ರ ಪುರುಷಾರ್ಥಿಗಳ ಮುಖದಿಂದ "ಯಾವಾಗಲಾದರೂ" ಎಂಬ ಶಬ್ದ ಬರಬಾರದು. ಅವರು ಸದಾ 'ಈಗಲೇ", ಎಂದು ಕೇವಲ ಹೇಳುವುದಿಲ್ಲ ಆದರೆ ಈಗಲೇ ಮಾಡಿ ತೋರಿಸುವರು. ಇದಾಗಿದೆ. ತೀವ್ರ ಪುರುಷಾರ್ಥ. ಮೇಲಕ್ಕೆ ಹೋಗುತ್ತಿದ್ದೀರಿ ಎಂದರೆ ಸಮೀಪವಾಗಿರಬೇಕಲ್ಲವೇ? 2- 3 ವರ್ಷದ ಸಮಯ ಇಟ್ಟುಕೊಂಡರೆ ತೀವ್ರ ಪುರುಷಾರ್ಥಿಯ ಸಾಲಿನಲ್ಲಿ

ಎಣಿಕೆಯಾಗುವುದಾ? ತೀವ್ರ ಪುರುಷಾರ್ಥಿಯ ಅರ್ಥವೇ ಆಗಿದೆ ಕಂಡು ಬರುವ ದುರ್ಬಲತೆಯ ಅಥವಾ ಕೊರತೆಯ ಮಾತನ್ನು ಈಗಲೇ ನಾಶ ಮಾಡುವುದು. ಸ್ಮೃತಿಯಿದ್ದಾಗ ಜೊತೆಗೆ ಸಾಮರ್ಥ್ಯವಿರುವ ಕಾರಣ ಯಾವುದೇ ಕೊರತೆಯನ್ನು ಪೂರ್ಣ ಮಾಡುವುದು ಸಾಧಾರಣ ಕಾರ್ಯವನ್ನು ಯೋಚಿಸದೆ ಸಹಜವಾಗಿ ಮಾಡಿದಂತೆ ಅನಿಸುತ್ತದೆ. ಇದು ಸ್ವಾಭಾವಿಕವಾಗುತ್ತದೆ. ಇಂತಹ ಪುರುಷಾರ್ಥ ಮಾಡಲು ದಿನದಿನಕ್ಕೆ ಸಿಗುವ ಶಿಕ್ಷಣದ ಸ್ವರೂಪವಾಗಿ, ಶಿಕ್ಷಣವನ್ನು ಪಾಠದ ರೂಪದಲ್ಲಿ ಬುದ್ಧಿಯಲ್ಲಿ ಇಟ್ಟುಕೊಳ್ಳಬೇಡಿ ಆದರೆ ಅದರ ಸ್ವರೂಪರಾಗಿ, ಆಗ ಏನಾಗುವಿರಿ? ಜ್ಞಾನ-ಸ್ವರೂಪ, ಪ್ರೇಮ-ಸ್ವರೂಪ, ಆನಂದ-ಸ್ವರೂಪವೆಂದು ನಿಮ್ಮ ನಿಜಸ್ಥಿತಿಯ ಗಾಯನವೇನಿದೆಯೋ ಆ ಸ್ಥಿತಿಯಾಗುವುದು. ಪಾಯಿಂಟ್ ನ ರೀತಿಯಿಂದ ಬುದ್ಧಿಯಲ್ಲಿ ಇಡಬೇಡಿ ಆದರೆ ಪಾಯಿಂಟನ್ನು ಪ್ರಾಕ್ಟಿಕಲ್ ಸ್ವರೂಪ ಮಾಡಿಕೊಳ್ಳಿ. ಆಗ ಸದಾ ಪಾಯಿಂಟ್ ಸ್ವರೂಪದಲ್ಲಿ ಸ್ಥಿತರಾಗುವಿರಿ. ಈಗ ಬಹು ಸಂಖ್ಯೆಯಲ್ಲಿ ಪಾಯಿಂಟನ್ನು ಪಾಯಿಂಟ್ ರೀತಿ ಧಾರಣೆ ಮಾಡುತ್ತೀರಿ, ವರ್ಣನೆ ಮಾಡುತ್ತೀರಿ. ಆದರೆ ಪಾಯಿಂಟ್ ಸ್ವರೂಪದಲ್ಲಿ ತಂದಾಗ ವರ್ಣನೆ ಮಾಡುವ ಬದಲು ಸಾಕ್ಷಾತ್ಕಾರ ಮೂರ್ತಿಯಾಗುವಿರಿ. ಆದ್ದರಿಂದ ಇದೇ ಪುರುಷಾರ್ಥ ಮಾಡಿ. ವರ್ಣನೆ ಮಾಡುವುದು ಬಹಳ ಸಹಜವಾಗಿದೆ. ಮನನ ಮಾಡುವುದೂ ಸಹಜವಾಗಿದೆ. ಏನನ್ನು ಮನನ ಮಾಡುತ್ತೀರೋ, ವರ್ಣನೆ ಮಾಡುತ್ತೀರೋ ಅದರ ಸ್ವರೂಪವಾಗಿ ಅನ್ಯ ಆತ್ಮರಿಗೆ ಸಹ ಸ್ವರೂಪಗಳ ಅನುಭವ ಮಾಡಿಸಿ, ಅವರನ್ನೇ ಸುಪುತ್ರ ಮತ್ತು ಪ್ರಮಾಣ ತೋರಿಸುವಂತಹವರು ಎಂದು ಹೇಳುತ್ತಾರೆ. ಸುಪುತ್ರರಿಗೆ ಪ್ರಾಮಾಣಿಕ ಮತ್ತು ಆಜ್ಞಾಕಾರಿ ಎಂದು ಹೇಳಲಾಗುತ್ತದೆ. ಎಲ್ಲರೂ ತಮ್ಮನ್ನು ಆಜ್ಞಾಪಾಲಕ ಎಂದು ತಿಳಿಯುತ್ತೀರಾ? ವಿಜಯದ ವರದಾನವಿರುವಾಗ, ಯಾವುದರಿಂದ ವಿಜಯ ಸಿಗುತ್ತದೆ? ಆದೇಶದಂತೆ ನಡೆದಾಗ, ಹಾಗಾದರೆ ಆಜ್ಞಾಕಾರಿಗಳಾಗಿಲ್ಲವೇ? ಸ್ಥೂಲದಲ್ಲಿ ಆದೇಶ ಪಾಲನೆ ಮಾಡುವ ಶಕ್ತಿಯು ಸೂಕ್ಷ್ಮದ ಆಧಾರದ ಮೇಲಿದೆ. ನಿರಂತರ ಪಾಲನೆಯಾಗುತ್ತದೆಯೇ? ಹಾಗಾದರೆ ಮುಖ್ಯ ಆದೇಶ ಯಾವುದು? ನಿರಂತರ ನೆನಪಿನಲ್ಲಿರಿ ಮತ್ತು ಮನ, ವಾಣಿ, ಕರ್ಮದಲ್ಲಿ ಪವಿತ್ರತೆಯಿರಲಿ, ಪವಿತ್ರರಾಗಿ, ಯೋಗಿಗಳಾಗಿ ಎಂದು ಬೇರೆಯವರಿಗೂ ಹೇಳುತ್ತೀರಿ. ಹಾಗಾದರೆ ಬೇರೆಯವರಿಗೆ ಹೇಳುವುದೇ ಮುಖ್ಯ ಆದೇಶವಾಯಿತಲ್ಲವೇ? **ಸಂಕಲ್ಪದಲ್ಲಿಯೂ ಅಪವಿತ್ರತೆ ಅಥವಾ ಅಶುದ್ಧತೆಯಿಲ್ಲದಿರುವುದಕ್ಕೆ ಸಂಪೂರ್ಣ ಪವಿತ್ರ ಎಂದು ಹೇಳುತ್ತಾರೆ.** ಹೀಗೆ ಆಜ್ಞಾಕಾರಿಗಳು ಆಗಿರುವಿರೇ? ಎಲ್ಲಾ ಶಕ್ತಿ-ಸೇನೆ ಪವಿತ್ರ ಮತ್ತು ಯೋಗಿಯಾಗಿದ್ದೀರಾ ಅಥವಾ ಇನ್ನೂ ಆಗಬೇಕೋ? ನಿರಂತರ ಯೋಗಿಯೂ ಆಗಿರುವಿರಿ, ನಿರಂತರ ಎಂದರೆ ಸಂಕಲ್ಪದಲ್ಲಿಯೂ ಅಶುದ್ಧತೆಯಿಲ್ಲ. ಸಂಕಲ್ಪದಲ್ಲಿಯೂ ಹಳೆಯ ಅಶುದ್ಧ ಸಂಸ್ಕಾರಗಳು ಸ್ಪರ್ಶವಾದರೆ ಸಂಪೂರ್ಣ ಪವಿತ್ರತೆ ಎನ್ನಲಾಗುವುದಿಲ್ಲ. ವೈಷ್ಣವರು ಯಾರದೇ ಸ್ಥೂಲ ಭೋಜನವನ್ನು ಸ್ವೀಕಾರ ಮಾಡುವುದಿಲ್ಲ ಆದರೆ ಯಾರದಾದರೂ ಕೈ ತಾಗಿದರೂ ತಮ್ಮನ್ನು ನಿಜವಾದ ವೈಷ್ಣವನೆಂದು ತಿಳಿಯುವುದಿಲ್ಲ. ಒಂದು ವೇಳೆ ಬುದ್ಧಿಯಿಂದ ಅಶುದ್ಧ ಸಂಕಲ್ಪ ಅಥವಾ ಹಳೆಯ ಸಂಸ್ಕಾರ ಸಂಕಲ್ಪ ರೂಪದಲ್ಲಿ ಸ್ಪರ್ಶವಾದರೆ ಸಂಪೂರ್ಣ ವೈಷ್ಣವ ಎನ್ನಲಾಗುವುದೇ? ಆ ಕರ್ತವ್ಯದ ಕಾರ್ಯವನ್ನು ಯಾರಾದರೂ ನೋಡಿದರೆ ಅದರ ಪ್ರಭಾವವಾಗುತ್ತದೆ. ಅದರ ಲೆಕ್ಕಾಚಾರವೂ ಇರುತ್ತದೆ ಎಂದು ಹೇಳಲಾಗುತ್ತದೆ. ಈ ಲೆಕ್ಕದಿಂದ ಯೋಚಿಸಿ ಹಳೆಯ ಸಂಸ್ಕಾರ ಮತ್ತು ಅಶುದ್ಧ ಸಂಕಲ್ಪ ಬುದ್ಧಿಯನ್ನು ಸ್ಪರ್ಶಿಸಿದರೂ ಸಂಪೂರ್ಣ ವೈಷ್ಣವ ಅಥವಾ ಸಂಪೂರ್ಣ ಪವಿತ್ರತೆ ಎಂದು ಹೇಳುವುದಿಲ್ಲ. ಪುರುಷಾರ್ಥದ ಗುರಿಯನ್ನು ಎಲ್ಲಿಯವರೆಗೆ ಇಟ್ಟುಕೊಂಡಿರುವಿರಿ? ಈ ಸ್ಥಿತಿಯವರೆಗೆ ಹೋಗಬೇಕಾದರೆ ಈ ಚಿಕ್ಕಪುಟ್ಟ ಮಾತುಗಳು ಈಗ ಈ ಸಮಯದಲ್ಲಿ ಶೋಭಿಸುತ್ತವೆಯೇ? ಎಂದು ಯೋಚಿಸಿ, ಇಲ್ಲಿಯವರೆಗೂ ಬಾಲ್ಯದ ಆಟ ಆಡುತ್ತಿರುವಿರೋ ಅಥವಾ ಬಾಲ್ಯದ ಆಟಗಳನ್ನು ಆಡುವ ಮನಸ್ಸಾಗುತ್ತದೆಯೋ? ಅಲ್ಲಿಯೇ ರಚನೆ ಮಾಡಿದಿರಿ, ಅಲ್ಲಿಯೇ ಪಾಲನೆ ಮಾಡಿದಿರಿ ಮತ್ತು ಅಲ್ಲಿಯೇ ವಿನಾಶ ಮಾಡಿದರೆ ಇದನ್ನು ಯಾವ ಆಟ ಎಂದು ಕರೆಯಲಾಗುತ್ತದೆ? ಅದು ಭಕ್ತಿಮಾರ್ಗದ ಅಂಧಶ್ರದ್ಧೆಯ ಆಟವಾಯಿತು. ಈಗಿನ ಸ್ಥಿತಿಗನುಸಾರ ಮಾಯೆ ಅವಶ್ಯವಾಗಿ ಬರುವುದು, ಸಮಯಾನುಸಾರ ವಿದಾಯ ಪಡೆಯಲು ಬರಬೇಕು. ಆದರೆ ಈ ರೂಪದಲ್ಲಿ ಅಲ್ಲ. ನಮಸ್ಕಾರ ಮಾಡಲು ಬರಬೇಕು. ಇನ್ನೂ ವಾಪಸ್ಸು ಹೋಗುವ ತಯಾರಿ ಮಾಡುವುದಿಲ್ಲವೇ? ಸ್ವಲ್ಪ ಸಮಯ ನಮಸ್ಕಾರ ನೋಡುವಿರಾ ಅಥವಾ ನಡೆಯುವಿರಾ?

ಶಕ್ತಿಯರು ಎಲ್ಲವನ್ನೂ ಅನುಭವ ಮಾಡಬೇಕು. ಬಾಪ್ ದಾದಾ ಇದನ್ನೂ ತ್ಯಾಗ ಮಾಡಿ ಈ ಭಾಗ್ಯವನ್ನು ಪಾಂಡವರಿಗೆ ಮತ್ತು ಶಕ್ತಿಯರಿಗೆ ವರದಾನದಲ್ಲಿ ಕೊಡುತ್ತಾರೆ. ಆದ್ದರಿಂದ ಶಕ್ತಿಯರಿಗೆ ಪೂಜೆ ಬಹಳ ಆಗುತ್ತದೆ. ಈಗಿನಿಂದಲೇ ಶಕ್ತಿಯರನ್ನು ಭಕ್ತರು ಕರೆಯಲು ಶುರು ಮಾಡಿದ್ದಾರೆ. ಧ್ವನಿ ಕೇಳಲು ಬರುತ್ತದೆಯೇ? ಮುಂದುವರೆದಂತೆ ಮೂರ್ತಿಯ ಮುಂದೆ ಭಕ್ತರು ಧೂಪ ಉರಿಸುತ್ತಾರೆ ಅಥವಾ ಗುಣಗಾನ ಮಾಡುತ್ತಾರೆ, ಆ ಪ್ರ್ಯಾಕ್ಟಿಕಲ್ ಸುಗಂಧವನ್ನು ಅನುಭವ ಮಾಡುವಿರಿ ಮತ್ತು ಅವರ ಮೊರೆಯನ್ನು ಸಮ್ಮುಖದಲ್ಲಿ ಕೇಳುವಂತೆ ಅನುಭವ ಮಾಡುವಿರಿ. ದುರ್ಬಿನ್ ನಲ್ಲಿ ದೂರದ ದೃಶ್ಯ ಹೇಗೆ ಸಮೀಪ ಕಂಡುಬರುವುದೋ ಹಾಗೆಯೇ ದಿವ್ಯ ಸ್ಥಿತಿ ದುರ್ಬೀನನ ಕಾರ್ಯ ಮಾಡುವುದು. ಇದಾಗಿದೆ ಶಕ್ತಿಯರ ಸ್ಮೃತಿಯ ಸಿದ್ಧಿಯಾಗುವುದು ಮತ್ತು ಈ ಅಂತಿಮ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಕಾರಣ ಶಕ್ತಿಯರ ಭಕ್ತರು ಶಕ್ತಿಯರಿಂದ ರಿದ್ಧಿ-ಸಿದ್ಧಿಯ ಇಚ್ಚೆಯನ್ನು ಇಟ್ಟುಕೊಳ್ಳುವರು. ಯಾವಾಗ ಸಿದ್ಧಿಯನ್ನು ನೋಡುವಿರೋ ಆಗಲಾದರೂ ಸಂಸ್ಕಾರವನ್ನು ತುಂಬಿಕೊಳ್ಳುವಿರಲ್ಲವೇ? ಹಾಗಾದರೆ ತಮ್ಮ ಸ್ಮೃತಿಯ ಸಿದ್ಧಿಯ ಸ್ವರೂಪ ಎದುರಿಗೆ ಬರುತ್ತದೆಯೇ? ಮಗ ತಂದೆಯನ್ನು ತೋರಿಸುವಂತೆ, ಪುತ್ರರಾಗಿ ತಂದೆಯನ್ನು ಪ್ರತ್ಯಕ್ಷತೆ ಮಾಡುವಿರೇ? ಬಾಪ್ ದಾದಾ ಪ್ರತ್ಯಕ್ಷ ರೂಪದಲ್ಲಿ ಈ ಪಾತ್ರ ನೋಡುವುದಿಲ್ಲ, ಆದರೆ ಶಕ್ತಿಯರು ಮತ್ತು ಪಾಂಡವರ ಈ ಪಾತ್ರವಿದೆ. ಆದ್ದರಿಂದ **ಒಂದು ಕ್ಷಣವೂ, ಒಂದು ಸಂಕಲ್ಪವೂ ಆದೇಶಕ್ಕೆ ಹೊರತಾಗಿರದಷ್ಟು ಪ್ರಾಮಾಣಿಕ ಮತ್ತು ಆಜ್ಞಾಕಾರಿಯಾಗಬೇಕು. ಇದಕ್ಕೆ ಆಜ್ಞಾಕಾರಿ.** ಎಂದು ಹೇಳುತ್ತಾರೆ. ಮತ್ತು **ಪ್ರಾಮಾಣಿಕ ಎಂದು ಯಾರಿಗೆ ಹೇಳುತ್ತಾರೆ? ಯಾರಿಗೆ ಸಂಕಲ್ಪದಲ್ಲಿ ಅಥವಾ ಸ್ವಪ್ನದಲ್ಲಿ ತಂದೆಯ ಅಥವಾ ತಂದೆಯ ಕರ್ತವ್ಯ ಅಥವಾ ತಂದೆಯ ಮಹಿಮೆ, ತಂದೆಯ ಜ್ಞಾನದ ಹೊರತು ಏನೂ ಕಾಣುವುದಿಲ್ಲವೋ ಅವರಿಗೆ ಸಂಪೂರ್ಣ ಪ್ರಾಮಾಣಿಕ ಎಂದು ಹೇಳಲಾಗುತ್ತದೆ. ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ, ಎರಡನೆಯ ಯಾವ ಮಾತು ಸ್ವಪ್ನದಲ್ಲಿ, ಸ್ಮೃತಿಯಲ್ಲಿ ಕಂಡುಬರಬಾರದು. ಅಂತಹವರಿಗೆ ಸಂಪೂರ್ಣ ಪ್ರಾಮಾಣಿಕ ಎಂದು ಹೇಳಲಾಗುತ್ತದೆ.** ಇದೇ ರೀತಿ ಆಜ್ಞಾಕಾರಿಯ ಪ್ರಾಕ್ಟಿಕಲ್ ನಡತೆಯನ್ನು ಹೇಗೆ ಗುರುತಿಸುವುದು? ಸತ್ಯತೆ ಮತ್ತು ಸ್ವಚ್ಛತೆ, ಸಂಕಲ್ಪದವರೆಗೆ ಸತ್ಯತೆ ಮತ್ತು ಸ್ವಚ್ಛತೆ ಬೇಕು. ಕೇವಲ ವಾಣಿಯವರೆಗಲ್ಲ. ಎಲ್ಲಿಯವರೆಗೆ ಪ್ರಾಮಾಣಿಕ ಮತ್ತು ಆಜ್ಞಾಕಾರಿ ಆಗಿದ್ದೇವೆ ಎಂದು ತಮ್ಮನ್ನು ತಾವು ನೋಡಿಕೊಳ್ಳಿ. ಒಬ್ಬನ ಜೊತೆಗೆ ಸದಾ ಬುದ್ಧಿಯ ನೆನಪಿದ್ದರೆ ಅನೇಕ ಸಂಗದ ರಂಗು ಹತ್ತುವುದಿಲ್ಲ. ಬುದ್ಧಿಯ ಎಳೆತ ಕಡಿಮೆಯಾಗಲು ಕಾರಣ ಅನೇಕ ಪ್ರಕಾರದ ಸಂಗದ ಆಕರ್ಷಣೆ ತನ್ನೆಡೆಗೆ ಸೆಳೆಯುತ್ತದೆ. ಆದ್ದರಿಂದ ಎಲ್ಲಾ ಸಂಗವನ್ನು ಕತ್ತರಿಸಿ, ಒಬ್ಬನ ಸಂಗವನ್ನು ಜೋಡಿಸುವುದೇ ವಾಯಿದೆಯಾಗಿದೆ. ಮೊದಲ ಈ ವಾಯಿದೆಯನ್ನು ನಿಭಾಯಿಸುವುದೇ ಸಂಪೂರ್ಣ ಪ್ರಾಮಾಣಿಕತೆಯಾಗಿದೆ. ತಿಳಿಯಿತೇ?

ಅವ್ಯಕ್ತ ಮುರಳಿ 22-06-1971.

***ತೀವ್ರ ಪುರುಷಾರ್ಥಿಯ ಲಕ್ಷಣಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಒಂದೇ ಶುದ್ಧ ಸಂಕಲ್ಪದಲ್ಲಿರುವ ಶಕ್ತಿಶಾಲಿ ಸ್ಥಿತಿ ಸ್ವರೂಪ.

2. ನಾನು ಪ್ರತಿಯೊಂದು ಕರ್ಮವನ್ನು ಬಂಧನಗಳಿಗೆ ಅತೀತವಾಗಿ ಮತ್ತು ಅತಿಪ್ರಿಯವಾಗಿ ಮಾಡುವ ಕರ್ಮಯೋಗಿ.

3. ನಾನು ಸರ್ವಶಕ್ತಿಗಳನ್ನು ಮತ್ತು ಸ್ಮೃತಿಯನ್ನು ಜನ್ಮಸಿದ್ಧ ಅಧಿಕಾರವಾಗಿ ಪಡೆದಿದ್ದೇನೆ.

4. ನಾನು ತಂದೆಯ ಶ್ರೀಮತ ಮತ್ತು ಆದೇಶದನುಸಾರವಾಗಿ ನಡೆದುಕೊಂಡು ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವ ಸುಪುತ್ರನು.

5. ನಾನು ತಂದೆಯ ಮೇಲೆ ನಿಶ್ಚಯ, ಅಧ್ಯಯನದ ಮೇಲೆ ನಿಶ್ಚಯ ಮತ್ತು ಸ್ವಯಂನ ಮೇಲೆ ನಿಶ್ಚಯದೊಂದಿಗೆ ಪ್ರತಿ ಸಮಯ, ಪ್ರತಿ ಸಂಕಲ್ಪದಲ್ಲಿ ನಿಶ್ಚಯ ಬುದ್ಧಿಯಿಂದ ವಿಜಯಿಯಾಗಿರುವ ತೀವ್ರ ಪುರುಷಾರ್ಥಿ.

6.ನಾನು ಯಾವುದೇ ಲೋಪ ಅಥವಾ ಬಲಹೀನತೆ ನನ್ನಲ್ಲಿ ಕಾಣಿಸಿಕೊಂಡಾಗಲೇ ಸ್ಮೃತಿ ಮತ್ತು ಸಮರ್ಥತೆಯಿಂದ ಅದನ್ನು ಸಮಾಪ್ತಿ ಮಾಡಿರುವ ತೀವ್ರ ಪುರುಷಾರ್ಥಿ.

7. ನಾನು ಶಿಕ್ಷಣಾ ಸ್ವರೂಪವಾಗಿ ಪ್ರತಿಯೊಂದು ಜ್ಞಾನಬಿಂದುವಿನ ಪ್ರತ್ಯಕ್ಷ ಸ್ವರೂಪವಾಗಿರುವ ಸಾಕ್ಷಾತ್ಕಾರ ಮೂರ್ತಿ.

8. ಸುಪುತ್ರನಾದ ನಾನು ಪ್ರಾಮಾಣಿಕ ಮತ್ತು ಆಜ್ಞಾಕಾರಿ.

9. ನನ್ನ ಸಂಕಲ್ಪದಲ್ಲಿ ಮತ್ತು ಸ್ವಪ್ನದಲ್ಲಿ ಒಬ್ಬ ತಂದೆಯ ಕರ್ತವ್ಯ, ತಂದೆಯ ಮಹಿಮೆ, ತಂದೆಯ ಜ್ಞಾನವೇ ಇರುವ ಸತ್ಯತೆ ಮತ್ತು ಸ್ವಚ್ಛತೆಯ ಸ್ವರೂಪ.

10. ನಾನು ಬುದ್ಧಿಯ ಸಂಲಗ್ನತೆಯೊಂದಿಗೆ ಇತರರ ಸಂಗವನ್ನು ಬಿಟ್ಟು ಒಬ್ಬ ತಂದೆಯ ಸಂಗದ ರಂಗಿನಲ್ಲಿ ಇದ್ದೇನೆ.